ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) 65

ಆ) 3 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಸರ್ಕಾರ ನಿಗಧಿಪಡಿಸಿರುವ ವಿದ್ಯಾರ್ಥಿಗಳಿಗಿಂತ ಕಡಿಮೆ ಇದ್ದು, ಉಳಿದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಸರ್ಕಾರ ನಿಗಧಿಪಡಿಸಿದ ವಿದ್ಯಾರ್ಥಿಗಳು ಇರುತ್ತಾರೆ.

ಇ) ಪರಿಶೀಲಿಸಲಾಗುತ್ತಿದೆ.

ತರೀಕೆರೆ ತಾಲ್ಲೂಕಿನಲ್ಲಿರುವ ಪ್ರೌಢಶಾಲೆಗಳು

732 (809) ಶ್ರೀ ನೀಲಕಂಠಪ್ಪ ಬಿ. ಆರ್. (ತರೀಕೆರೆ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕಿನಲ್ಲಿ (1) ಬಗ್ಗವಳ್ಳಿ (2) ಕರಕುಚ್ಚಿ ಬಗ್ಗಬಳ್ಳಿ (3) ಕಡಗ ಈ ಗ್ರಾಮಗಳಿಗೆ ಪ್ರೌಢ ಶಾಲೆಗಳನ್ನು ನೀಡಲು ಸರ್ಕಾರದ ಆಲೋಚನೆಯಲ್ಲಿದೆಯೇ?

ಆ) ಜಿಲ್ಲೆಯ ಎಷ್ಟು ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ಪ್ರಾರಂಭಿಸಲಾಗಿದೆ?

ಇ) ಅನುದಾನ ಪಡೆದ ಪ್ರೌಢ ಶಾಲೆಗಳಿಗೂ ಕಂಪ್ಯೂಟರ್ ಅಳವಡಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು);

ಅ) ಸದ್ಯಕ್ಕೆ ಇಲ್ಲ

ಆ) 34 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ಪ್ರಾರಂಭಿಸಲಾಗಿದೆ.

ಇ) ಇಲ್ಲ

ತರೀಕೆರೆ ತಾಲ್ಲೂಕು ಗುಡ್ಡದ ಮಲ್ಲೇನಹಳ್ಳಿ ಕೆರೆಯಿಂದ ಕುಡಿಯುವ ನೀರು

733 (810) ಶ್ರೀ ನೀಲಕಂಠಪ್ಪ ಬಿ. ಆರ್. (ತರೀಕೆರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕು ಗಡ್ಡದ ಮಲ್ಲೇನಹಳ್ಳಿ ಕೆರೆ ಮುಖಾಂತರ ಹಳ್ಳಿಗಳಿಗೆ ನೀರು ಕುಡಿಯಲು ಭದ್ರಾ ಜಲಾಶಯದ ನಾಲೆಯಿಂದ ನೀರು ಒದಗಿಸಲು ಸರಕಾರರ ಅನುಮತಿ ನೀಡಿದೆಯೆ?

ಆ) ಹಾಗಿದ್ದಲ್ಲಿ ಈ ಒಂದು ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು ಇದರ ಬಗ್ಗೆ ನಕ್ಷೆಯನ್ನೇನಾದರೂ ತಯಾರಿಸಲಾಗಿದೆಯೇ:

ಇ) ಈ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?